

ಮರಳಿ ಬಂದ ದೀಪಿಕಾ

ಜನವರಿ 10ರಂದು ಬಿಡುಗಡೆಯಾಗಲಿರುವ ದೀಪಿಕಾ ಪಡುಕೋಣೆಯ 'ಛಪಾಕ್' ಈಗಾಗಲೇ ಆಕೆಯ ನಟನೆಯ ಬಗ್ಗೆ ಸಾಕಷ್ಟು ನಿರೀಕ್ಷೆಗಳನ್ನು ಹುಟ್ಟಿಸಿದೆ. ಆ್ಯಸಿಡ್ ದಾಳಿಗೊಳಗಾದ ಮಹಿಳೆಯ ನೈಜ ಘಟನೆ ಆಧರಿಸಿದ ಈ ಚಿತ್ರದ ಬಿಡುಗಡೆಯನ್ನು ಸ್ವತಃ ಸಹನಿರ್ಮಾಪಕಿಯೂ ಆದ ದೀಪಿಕಾ ಕೂಡಾ ಕಾತರದಿಂದ ಕಾದಿದ್ದಾಳೆ. ಗ್ಲಾಮರ್ ಪಾತ್ರಗಳಲ್ಲಿ ಮಿಂಚುತ್ತಿರುವ ನಟಿಯೊಬ್ಬಳು ತನ್ನ ಮುಖವನ್ನೇ ವಿರೂಪಗೊಳಿಸಿಕೊಂಡು ಇಂತಹ ಕಥೆಯಾಧಾರಿತ ಚಿತ್ರದಲ್ಲಿ ನಟಿಸುವುದು ಬಾಲಿವುಡ್‌ಗೂ ಕುತೂಹಲ ಹುಟ್ಟಿಸಿರುವ ಸಂಗತಿ. ಈ ಸುದ್ದಿ ಓದುವ ಹೊತ್ತಿಗೆ 'ಛಪಾಕ್'ಗೆ ಪ್ರೇಕ್ಷಕರ ಬೆಂಬಲ ಎಷ್ಟರ ಮಟ್ಟಿಗೆ ಲಭಿಸಲಿದೆ ಎನ್ನುವುದೂ ಸ್ಪಷ್ಟವಾಗಲಿದೆ. 2019ರಲ್ಲಿ ದೀಪಿಕಾ ನಟಿಸಿದ ಯಾವ ಚಿತ್ರವೂ ಬಿಡುಗಡೆ ಆಗಿಲ್ಲ. 2018ರಲ್ಲಿ ಸೂಪರ್‌ಹಿಟ್ ಆದ 'ಪದ್ಮಾವತ್' ಖ್ಯಾತಿಯಲ್ಲೇ ಇಡೀ ವರ್ಷ ತಳ್ಳಿದ ದೀಪಿಕಾಳನ್ನು ತೆರೆಯ ಮೇಲೆ ನೋಡಲು ಅಭಿಮಾನಿಗಳೂ ಕಾತುರದಿಂದ ಇದ್ದಾರೆ.

'ಛಪಾಕ್' ಜೊತೆಗೇ ಬರಲಿರುವ ಚಿತ್ರ ಅಜಯ್ ದೇವಗನ್‌ನ 'ತಾನಾಜಿ: ದಿ ಅನ್‌ಸಂಗ್ ವಾರಿಯರ್' ಹೆಸರೇ ಸೂಚಿಸುವಂತೆ ಐತಿಹಾಸಿಕ ಚಿತ್ರ. ಈ ಚಿತ್ರದಲ್ಲಿ ಅಜಯ್ ಪತ್ನಿ ಕಾಜೋಲ್ ನಟಿಸುತ್ತಿರುವುದು ವಿಶೇಷ. ಕಾಜೋಲ್ ಕಥೆಯೂ ಅದೇ. 2019ರಲ್ಲಿ ಈಕೆ ನಟಿಸಿದ ಯಾವ ಚಿತ್ರವೂ ತೆರೆಗೆ ಬಂದಿಲ್ಲ. 2018ರಲ್ಲಿ 'ಹೆಲಿಕಾಪ್ಟರ್ ಈಲಾ' ಎನ್ನುವ ಚಿತ್ರದಲ್ಲಿ ಕಾಜೋಲ್ ನಟಿಸಿದ್ದು, ಅದು ಫ್ಲಾಪ್ ಆಗಿತ್ತು. ಆದರೆ 'ತಾನಾಜಿ'ಯಲ್ಲಿ ಮರಾಠಿ ಇತಿಹಾಸದ ನೈಜ ಘಟನೆಗಳನ್ನು ಆಧರಿಸಿ ಕಥೆ ಹೆಣೆದಿದ್ದು ಸೈಫ್ ಅಲಿ ಖಾನ್, ಜಯಾ ಬಚ್ಚನ್, ಜಗಪತಿ ಬಾಬು ಮತ್ತಿತರರೂ ಇದ್ದಾರೆ. ಓಮ್ ರೌತ್ ನಿರ್ದೇಶನದ ಈ ಚಿತ್ರಕ್ಕೆ 150 ಕೋಟಿ ರೂಪಾಯಿ ಸುರಿದಿದ್ದು, ಅಜಯ್ ದೇವಗನ್ ಕೂಡಾ ನಿರ್ಮಾಪಕರಲ್ಲಿ ಒಬ್ಬ. ಯುದ್ಧದ ಚಿತ್ರಗಳಿಗೆ ಪ್ರೇಕ್ಷಕರು ಇದ್ದೇ ಇದ್ದಾರೆ. ಅದರಲ್ಲೂ ಈ ಚಿತ್ರ 'ತ್ರೀ-ಡಿ'ನಲ್ಲೂ ಬರುವುದರಿಂದ ನಿರ್ಮಾಪಕರ ನಿರೀಕ್ಷೆ ಜೋರಾಗಿಯೇ ಇದೆ. ■

ಪ್ರೇಮಿಗಳ ಸುತ್ತಾಟ

ಕ್ರಿಸ್ಮಸ್ ಮತ್ತು ಹೊಸ ವರ್ಷದ ವಿದೇಶೀ ಪಾರ್ಟಿಗಳನ್ನು ಮುಗಿಸಿ ಬಾಲಿವುಡ್‌ನ ಬಹುತೇಕ ತಾರೆಯರು ವಾಪಸಾಗಿದ್ದಾರೆ. ಕೆಲವರು ಹೊಸ ಸಿನಿಮಾಗಳ ಉಳಿದ ಕೆಲಸಗಳಲ್ಲಿ ತಕ್ಷಣ ಬ್ಯುಸಿಯೂ ಆಗಿದ್ದಾರೆ. ರಣಬೀರ್ ಕಪೂರ್ ಮತ್ತು ಅಲಿಯಾ ಭಟ್ ಜೋಡಿ ಥಾಯ್ಲೆಂಡ್‌ನಲ್ಲಿ ಹೊಸ ವರ್ಷಾಚರಣೆ ಮುಗಿಸಿಕೊಂಡು ಮಧ್ಯರಾತ್ರಿ ಮುಂಬೈ ಏರ್‌ಪೋರ್ಟ್‌ನಲ್ಲಿ ಇಳಿದಾಗ ಛಾಯಾಗ್ರಾಹಕರ ದೊಡ್ಡ ದಂಡೇ ಕಾದು ಕುಳಿತಿತ್ತು. ಹೊರಗೆ ಕಾರಿನತ್ತ ಬರುವಾಗ ಛಾಯಾಗ್ರಾಹಕರಿಂದ ಅಲಿಯಾಗೆ ರಕ್ಷಣೆ ಕೊಡುತ್ತಾ ರಣಬೀರ್ ತನ್ನ ಬಾಯ್‌ಫ್ರೆಂಡ್ ಡ್ಯೂಟಿಯನ್ನು ಕರೆಕ್ಟಾಗಿ ನಿಭಾಯಿಸಿದನಂತೆ. ಜೊತೆಗಿದ್ದ ನಿರ್ದೇಶಕ ಅಯಾನ್ ಮುಖರ್ಜಿ ಇಬ್ಬರಿಗೂ ಸಾಥ್ ನೀಡಲೆಂದೇ ಥಾಯ್ಲೆಂಡ್‌ಗೆ ಹೋಗಿದ್ದಂತೆ.

ರಣಬೀರ್ ಮತ್ತು ಅಲಿಯಾ ನಟನೆಯ 'ಬ್ರಹ್ಮಾಸ್ತ್ರ' ಸಿನಿಮಾದ ಶೂಟಿಂಗ್ ಕಳೆದ ಒಂದು ವರ್ಷದಿಂದ ನಡೆಯುತ್ತಲೇ ಇದೆ! ಈ ಚಿತ್ರದ ನೆಪದಲ್ಲಿ ರಣಬೀರ್ ಮತ್ತು ಅಲಿಯಾ 'ಗುಡ್‌ಫ್ರೆಂಡ್ಸ್' ಪಟ್ಟದಿಂದ ಮೇಲಕ್ಕೆ ಜಿಗಿದು ಪ್ರೇಮಿಗಳ ಪಟ್ಟಕ್ಕೆ ಏರಿದ್ದೂ ಆಗಿದೆ. ಈ ವರ್ಷ ಮದುವೆಯ ಸುದ್ದಿ ಬಂದರೂ ಬರಬಹುದು. ಅಂದ ಹಾಗೆ 'ಬ್ರಹ್ಮಾಸ್ತ್ರ' ಚಿತ್ರ ತೆರೆಗೆ ಬರುವುದು ಯಾವಾಗ ಎಂದು ಬಾಲಿವುಡ್ ಪಂಡಿತರೂ ಕುತೂಹಲದಿಂದ ಕಾಯುತ್ತಿದ್ದಾರೆ. ಈ ವರ್ಷ ಬಿಡುಗಡೆ ಆಗಬಹುದಾದ ಹತ್ತಿಪ್ಪತ್ತು ಸಿನಿಮಾಗಳ ಅಂದಾಜು ದಿನಾಂಕ ಗೊತ್ತಾಗಿದ್ದರೂ 'ಬ್ರಹ್ಮಾಸ್ತ್ರ'ದ ದಿನಾಂಕ ಇನ್ನೂ ಪ್ರಕಟವಾಗಿಲ್ಲ. ನಿರ್ದೇಶಕರನ್ನು ಕೇಳಿದರೆ 'ಈ ವರ್ಷ ಬಿಡುಗಡೆ ಖಂಡಿತ' ಎನ್ನುತ್ತಿದ್ದಾರೆ. ಅಲ್ಲಿಯವರೆಗೆ ಪ್ರೇಮಿಗಳ ಸುತ್ತಾಟದ್ದೇ ಸುದ್ದಿ!

■ ಬಿಂದು